ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.: 305/2020

.................................................................................

CW 06
PW 01

ಹೆಸರು : ಕಲ್ಲನಗೌಡಾ ಪಾಟೀಲ

ತಂದೆಯ ಹೆಸರು : ಯಲ್ಲನಗೌಡಾ

ವಯಸ್ಸು : 54 ವರ್ಷ

ಉದ್ಯೋಗ : ಬಸ್ ನಿರ್ವಾಹಕ

ವಾಸಸ್ಥಳ : ಧಾರವಾಡ.

ದಿನಾಂಕ 16-03-2023 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ನಾನು 2020 ರಲ್ಲಿ ಹಳಿಯಾಳ ಬಸ್ ಡಿಪೋದಲ್ಲಿ ಕೆಲಸ ಮಾಡುತ್ತಿದ್ದೆ. ಆ ಸಮಯದಲ್ಲಿ ಆರೋಪಿ ಹಳಿಯಾಳ ಡಿಪೋದಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದ. ದಿನಾಂಕ 24-01-2020 ರಂದು ದಾಂಡೇಲಿ ಇಂದ ಹಳಿಯಾಳಕ್ಕೆ ಕೆಎ 42 - ಎಫ್ 1286 ನೋಂದಣಿ ಸಂಖ್ಯೆಯ ಕೆ ಎಸ್ ಆರ್ ಟಿ ಸಿ ಬಸ್‌ನಲ್ಲಿ ನಾನು ಮತ್ತು ಆರೋಪಿ ಕ್ರಮವಾಗಿ ನಿರ್ವಾಹಕ ಮತ್ತು ಚಾಲಕನಾಗಿ ಬರುತ್ತಿದ್ದೆವು. ಅ ಸಮಯದಲ್ಲಿ ಆರೋಪಿ ನಿಧಾನವಾಗಿ ಬಸ್ ಚಲಾಯಿಸುತ್ತಿದ್ದ. ಬಸ್ ಗೋರಿಖಾನ್ ಪೆಟ್ರೋಲ್ ಬಂಕ್ ಹತ್ತಿರ ಇದ್ದಾಗ ಹಳಿಯಾಳ ಕಡೆಯಿಂದ ಯಲ್ಲಾಪುರ ಕಡೆಗೆ ಒಂದು ಕಾರು ಹೋಗುತ್ತಿತ್ತು. ಸದರಿ ಕಾರನ್ನು ಓವರ್ ಟೇಕ್ ಮಾಡಿ ಮಂಜುನಾಥ ಮಿರಾಶಿ ಮತ್ತು ಶಿವಾಜಿ ಮಿರಾಶಿ ಒಂದು ಬೈಕ್ ನಲ್ಲಿ ಬಂದು ನಮ್ಮ ಬಸ್ಸನ ಬಲಬದಿಗೆ ಡಿಕ್ಕಿ ಹೊಡಿಸಿ ಅಪಘಾತಪಡಿಸಿದರು. ಆಗ ಮದ್ಯಾಹ್ನ 12-00 ಗಂಟೆ ಆಗಿತ್ತು. ಅಪಘಾತ ಸಮಯದಲ್ಲಿ ಆರೋಪಿ 40 ಕಿಮೀ ವೇಗದಲ್ಲಿ ಬಸ್ಸನ್ನು ಚಲಾಯಿಸುತ್ತಿದ್ದ. ಬೈಕ್‌ನಲ್ಲಿದ್ದ ಇಬ್ಬರೂ ಸಹ ಸ್ಥಳದಲ್ಲಿ ಮರಣ ಹೊಂದಿದ್ದರು. ಬೈಕ್ ನಂಬರ ನನಗೆ ನೆನಪಿಲ್ಲ. ಅಪಘಾತದ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ. ಸಾಕ್ಷಿಗೆ ಒಂದು ಭಾವಚಿತ್ರ ತೋರಿಸಿದ್ದು, ಸದರಿ ಭಾವಚಿತ್ರದಲ್ಲಿ ಕಾಣುವ ಬಸ್ಸು ಮತ್ತು ಬೈಕ್ ಆ ದಿನ ಅಪಘಾತದಲ್ಲಿ ಭಾಗಿಯಾದ ವಾಹನಗಳು ಆಗಿರುತ್ತವೆ. ಸದರಿ ಭಾವಚಿತ್ರವನ್ನು ನಿಪಿ 1 ಎಂದು ಗುರುತಿಸಲಾಯಿತು. ಸದರಿ ಅಪಘಾತವು ಬೈಕ್ ಚಾಲಕನ ತಪ್ಪಿನಿಂದ ಆಗಿರುತ್ತದೆ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**ಪಾಟೀ ಸವಾಲು : ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿನಾಂಕ 24-01-2020 ರಂದು ಪೋಲಿಸರಿಗೆ ನಾನು "ನಮ್ಮ ಬಸ ಚಾಲಕನು ----- ರಸ್ತೆಯ ಬಿದ್ದು ಮೃತಪಟ್ಟಿದ್ದರು" ಎಂದು ಈಗ ಓದಿ ಹೇಳಿದಂತೆ ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿಪಿ 2 ಎಂದು ಗುರುತಿಸಲಾಯಿತು. ಹಾಗೂ ಮೇಲೆ ಹೇಳಿದಂತೆ ಘಟನೆ ಆಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿ ಯ ತಪ್ಪಿನಿಂದ ಅಪಘಾತ ಆಗಿದ್ದರೂ ಸಹ ಆರೋಪಿ ನಮ್ಮ ಇಲಾಖಾ ಸಿಬ್ಬಂದಿ ಯಾಗಿರುವುದಂರಿದ ಆತನಿಗೆ ಅನುಕೂಲವಾಗಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು** ಃ ಆರೋಪಿ ಪರ ಶ್ರೀ ಎಸ್ ವೈ ಜಿ ವಕೀಲರು ಏನೂ ಇಲ್ಲ ಎನ್ನುತ್ತಾರೆ.

|ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.